ಸೇರಿರುವುದನ್ನು ನೋಡಿದರೆ ಜನ ಊರಿನ ಹೆಸರಿನ ಬಗ್ಗೆ ಎಷ್ಟು ಬೇಸತ್ತಿರಬಹುದೆಂದು ಯೋಚಿಸುತ್ತಾ ತನ್ನ ಮಾತನ್ನು ಶುರುಮಾಡಿದನು. ಈ ಊರಿನ ಹೆಸರಿನಿಂದ ಎಲ್ಲರಿಗೂ ತೊಂದರೆಗಳಾಗುತ್ತಿರುವುದನ್ನು ಸಂಕ್ಷಿಪ್ತವಾಗಿ ವಿವರಿಸಿ, 'ಎಲ್ಲರ ಅಪೇಕ್ಷೆಯಂತೆ ಊರಿನ ಹೆಸರನ್ನು ಬದಲಾಯಿಸುವ ಕಾಲ ಈಗ ಕೂಡಿಬಂದಿದೆ. ನಮ್ಮ ಅಧ್ಯಕ್ಷರು ಮಾನ್ಯ ಎಂ.ಎಲ್.ಎ.ಯವರ ಹತ್ತಿರ ಈ ಕುರಿತು ಮಾತನಾಡಿದ್ದಾರೆ. ಮುಂದಿನ ವಾರ ಎಂ.ಎಲ್.ಎ. ಮತ್ತು ತಾಲ್ಲೂಕು ಕಚೇರಿಯ ಸರ್ವರೂ ನಮ್ಮ ಹಳ್ಳಿಗೆ ಗ್ರಾಮ ವಾಸ್ತವ್ಯಕ್ಕೆ ಆಗಮಿಸುತ್ತಿದ್ದು, ಅಷ್ಟರೊಳಗೆ ಎಲ್ಲರ ಅಪೇಕ್ಷೆಯಂತೆ ನಮ್ಮ ಊರಿಗೆ ಒಂದು ಒಳ್ಳೆಯ ಹೆಸರನ್ನು ಅಂತಿಮಗೊಳಿಸಿ, ನಮ್ಮ ಊರಿನ ಹೆಸರು ಬದಲಾವಣೆಯ ಬಗ್ಗೆ ಇಡೀ ಗ್ರಾಮಸ್ಥರು ಸಹಿ ಮಾಡಿದ ಅರ್ಜಿಯನ್ನು ಆ ದಿನ ಸಲ್ಲಿಸಿದರೆ, ಅದನ್ನು ಸರ್ಕಾರದ ವತಿಯಿಂದ ಬಹಳ ಬೇಗ ಮಾಡಿಸುವುದಾಗಿ ಎಂ.ಎಲ್.ಎ.ಯವರು ಭರವಸೆಕೊಟ್ಟಿದ್ದಾರೆ. ಹೀಗಾಗಿ ಊರಿಗೆ ಇಡಬಹುದಾದ ಹೆಸರನ್ನು ಆಯ್ಕೆ ಮಾಡಲು ಈ ಸಭೆಯನ್ನು ಕರೆಯಲಾಗಿದೆ. ಯಾರು ಬೇಕಾದರೂ ಸೂಚಿಸಬಹುದು' ಎಂದನು. ಹಾಗೆ ಹೇಳಿದ್ದೇ ತಡ ಜನಗಳು ತಮಗೆ ತೋಚಿದ ಹೆಸರುಗಳನ್ನೆಲ್ಲಾ ಸೂಚಿಸತೊಡಗಿದರು.

ಎಲ್ಲರೂ ಒಟ್ಟಿಗೆ ಮಾತನಾಡಲು ಶುರುಮಾಡಿದ್ದರಿಂದ, ಆ ಗದ್ದಲದಲ್ಲಿ ಯಾರು ಏನು ಮಾತನಾಡುತ್ತಿದ್ದಾರೆಂದು ಯಾರಿಗೂ ಕೇಳಿಸದಂತಾಗಿ, ಕೊನೆಗೆ ಅಧ್ಯಕ್ಷ ಭೋಜೇಗೌಡರು ಎಲ್ಲರನ್ನು ಸುಮ್ಮನಿರುವಂತೆ ಗದರಿ, ಶಿವರಾಮನಿಗೆ ಮತ್ತೆ ಮಾತನಾಡಲು ಸೂಚಿಸಿದರು. ಶಿವರಾಮನು ಮೈಕನ್ನು ಮತ್ತೆ ಎತ್ತಿಕೊಂಡು, 'ಸುಖಾಸುಮ್ಮನೆ ಅರ್ಥವಿಲ್ಲದ, ಗೊತ್ತುಗುರಿಯಿಲ್ಲದ ಹೆಸರನ್ನು ಊರಿಗೆ ಇಡುವುದರ ಬದಲು ನಮ್ಮ ಊರಿಗಾಗಿ ಅಥವಾ ನಮ್ಮೂರ ಜನರ ಒಳಿತಿಗಾಗಿ ದುಡಿದ ಮಹನೀಯರ ಹೆಸರನ್ನು ಇಟ್ಟರೆ ಅವರು ಮಾಡಿದ ನಿಸ್ವಾರ್ಥ ಸೇವೆಯನ್ನು ಮಾತ್ರವಲ್ಲದೇ ಅವರ ವ್ಯಕ್ತಿತ್ವವನ್ನು ಗೌರವಿಸಿದಂತಾಗುತ್ತದೆ. ಹೀಗಾಗಿ ಅವರ ಹೆಸರು ಚರಿತ್ರೆಯಲ್ಲಿ ಅಮರವಾಗಿ ಉಳಿಯುತ್ತದೆ. ಇದು ಮುಂದಿನ ಪೀಳಿಗೆಗೆ ಒಳ್ಳೆಯ ಕೆಲಸಗಳನ್ನು ಮಾಡಲು ಉತ್ತೇಜಿಸಿದಂತಾಗುತ್ತದೆ' ಎಂದನು. ಮತ್ತೆ ಸಭೆಯಲ್ಲಿ ಗುಜು ಗುಜು ಶುರುವಾಯಿತು. ಮತ್ತೆ ಮಾತು ಶುರುಮಾಡಿದ ಶಿವರಾಮನು, 'ಆ ರೀತಿ ಊರಿಗೋಸ್ಕರ ಹೋರಾಡಿದ ಮಹನೀಯರೆಂದರೆ ಸ್ವಾತಂತ್ರ್ಯ ಹೋರಾಟಗಾರರಾಗಿ ಸಮಾಜಸೇವೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟು, ಕೊನೆಯವರೆಗೆ ಅವಿವಾಹಿತರಾಗಿಯೇ ಉಳಿದು, ತಮ್ಮ ಕಾಲಾನಂತರ ತಮ್ಮದೆಂದು ಉಳಿದಿದ್ದ ಅರ್ಧ ಎಕರೆ ಜಮೀನು ಮತ್ತು ಪುಟ್ಟ ಮನೆಯನ್ನು ಗ್ರಂಥಾಲಯಕ್ಕೆ ಉಪಯೋಗಿಸಿಕೊಳ್ಳಲು ವಿಲ್ ಬರೆದಿಟ್ಟು ಇತ್ತೀಚೆಗಷ್ಟೇ ನಿಧನರಾದ ಶ್ರೀನಿವಾಸರಾಯರ ಹೆಸರು ಬಹಳ ಪ್ರಮುಖವಾದುದು' ಎಂದನು. ಸಭೆಯು ಒಮ್ಮೆಲೆ ಜೋರಾಗಿ ಚಪ್ಪಾಳೆ ಮತ್ತು ಶಿಳ್ಳೆಗಳಿಂದ ಆ ಹೆಸರಿಗೆ ಅನುಮೋದನೆ ನೀಡಿತು. ಅಷ್ಟರಲ್ಲಿಯೇ ಶಿವರಾಮನು ತನ್ನ ಮಾತನ್ನು ಮತ್ತೆ ಶುರುಮಾಡುತ್ತಾ, 'ಈ ಸಭೆ ಶುರು ಮಾಡುವುದಕ್ಕಿಂತ ಮುಂಚೆ ಊರಿನ ಗಣ್ಯರು ಮತ್ತು ಊರಿನ ಹಲವಾರು ಪ್ರಮುಖರ ಅಭಿಪ್ರಾಯವನ್ನು ಪಡೆದುಕೊಂಡು ಇಬ್ಬರ ಹೆಸರನ್ನು ಅಂತಿಮಗೊಳಿಸಲಾಗಿದೆ. ಒಂದು ಶ್ರೀನಿವಾಸರಾಯರದು ಮತ್ತೊಂದು ಹೆಸರು ನಮ್ಮ ಅಧ್ಯಕ್ಷರ ತಂದೆ ದಿವಂಗತ ತಮ್ಮೇಗೌಡರದು. ಇವರಿಬ್ಬರಲ್ಲಿ ಒಬ್ಬರ ಹೆಸರನ್ನು ಒಂದೆರಡು ದಿನಗಳಲ್ಲಿ ಅಂತಿಮಗೊಳಿಸಿ ಶ್ರೀನಿವಾಸಪುರ ಅಥವಾ ತಮ್ಮೇಗೌಡಪುರ ಎಂಬ ಒಂದನ್ನು ಆಯ್ಕೆ ಮಾಡಬೇಕು' ಎಂದು ಹೇಳಿ ಕುಳಿತುಕೊಂಡನು.

'ಶ್ರೀನಿವಾಸರಾಯರ' ಹೆಸರಿಗೆ ಜೋರಾಗಿ ಕರತಾಡನ ಮಾಡಿದ ಜನ 'ತಮ್ಮೇಗೌಡರ' ಹೆಸರನ್ನು ಹೇಳಿದಾಗ ಮಾತ್ರ ಬಹಳಷ್ಟು ಜನ ಮೌನಕ್ಕೆ ಶರಣಾದರು. ಊರಿನಲ್ಲಿ ಯಾರಾದರೂ ಹಣದ ಅವಶ್ಯಕತೆಯಿಂದ ತಮ್ಮೇಗೌಡರ ಬಳಿ ಬಂದರೆ ಆತ ಅವರಿಗೆ ಹಣದ ಸಹಾಯ ಮಾಡುತ್ತಿದ್ದನಾದರೂ, ಸಹಾಯ ಮಾಡುವ ನೆಪದಲ್ಲಿ ಬಹಳಷ್ಟು ಜನರ ಹೊಲಗದ್ದೆಗಳನ್ನು ಬಡ್ಡಿ–ಚಕ್ರಬಡ್ಡಿ ನೆಪದಲ್ಲಿ ವಶಪಡಿಸಿಕೊಂಡಿದ್ದನು. ಹೀಗಾಗಿ ತಮ್ಮೇಗೌಡರ ಹೆಸರು ಬಂದಾಕ್ಷಣ ಅಧ್ಯಕ್ಷರ ಚೇಲಾಗಳು ಮತ್ತು ಆತನಿಂದ ಫಲಾನುಭಾವಿಗಳಾಗಿದ್ದ ಕೆಲವರು ಮಾತ್ರ ಜೋರಾಗಿ ಚಪ್ಪಾಳೆ ಹೊಡೆದು 'ತಮ್ಮೇಗೌಡಪುರ

